# ಕನಕ ಚಂಪಾ



■ ಚಿತ್ರ ಬರಹ:
**ರಶ್ಮಿ ಶ್ರೀನಿವಾಸ**

ಸ್ಟರ್ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದ ಈ ಮರದ ಆಂಗ್ಲ ಹೆಸರು ಡಿನ್ನರ್ ಪ್ಲೇಟ್ ಟ್ರೀ (Dinner Plate tree) ಎಂದು. ಹೆಸರೇ ಸೂಚಿಸುವಂತೆ ಇದರ ಎಲೆಗಳನ್ನು ಊಟ ಬಡಿಸಲು ಉಪಯೋಗಿಸುತ್ತಾರೆ. ಹಿಮಾಲಯದ ತಪ್ಪಲು ಹಾಗೂ ಬರ್ಮಾ ಮೂಲದ ಈ ಮರ, ನೀರಿನ ಸೆಲೆ ಇರುವ ಇತರ ಪ್ರದೇಶ-ಗಳಲ್ಲಿಯೂ (ವಿಶೇಷತಃ ಪೂರ್ವ ಭಾರತದಲ್ಲಿ) ಕಾಣಸಿಗುತ್ತದೆ. ಸ್ಥಳೀಯವಾಗಿ ಕನಕ ಚಂಪಾ, ಮುಚಕುಂದ ಇತ್ಯಾದಿ ಹೆಸರುಗಳಿಂದ ಪರಿಚಿತವಾಗಿರುವ ಈ ಮರದ ಸಸ್ಯ ಶಾಸ್ತ್ರೀಯ ಹೆಸರು ಟೆರೋಸ್ಪರ್ಮಮ್ ಎಸಿರಿಫೋಲಿಯಂ (Pterospermum acerifolium) ಗ್ರೀಕ್ ಭಾಷೆಯಿಂದ ಉತ್ಪತ್ತಿಯಾದ ಈ ಹೆಸರಿನರ್ಥ ರೆಕ್ಕೆಯುಳ್ಳ ಬೀಜ ಹಾಗೂ ಮೇಪಲ್ ಎಲೆಯಂತಹ ಎಲೆಯುಳ್ಳದ್ದು ಎಂದು.

ನೈಸರ್ಗಿಕ ಪರಿಸರದಲ್ಲಿ 50–60 ಮೀ. ಎತ್ತರದವರೆಗೆ ಬೆಳೆಯಬಲ್ಲ ಈ ಮರದ ಎಲೆಗಳೂ ಅಸಾಧಾರಣ ಗಾತ್ರದವೇ. ಸುಮಾರು 30–35 ಸೆಂ.ಮೀ. ಉದ್ದ, 20–25 ಸೆಂ.ಮೀ. ಅಗಲದವರೆಗೆ ಬೆಳೆಯಬಲ್ಲ ಈ ಎಲೆಗಳು ದಪ್ಪವೂ ಇರುವುದರಿಂದ ನಮ್ಮಲ್ಲಿ ಬಾಳೆ ಎಲೆ, ಮುತ್ತುಗದೆಲೆಯ ಪತ್ರಾವಳಿ, ಅಡಿಕೆ ಹಾಳೆಯ ತಟ್ಟೆ ಇತ್ಯಾದಿಗಳಂತೆಯೇ ಊಟ ಬಡಿಸಲು, ತಿಂಡಿ ಬಡಿಸಲು, ತೆಗೆ-ದಿಡಲು, ಪರಿಸರ ಸ್ನೇಹಿ ಟಿಫಿನ್ ಕ್ಯಾರಿಯರ್‌ಗಳಂತೆ ಉಪಯೋಗಿಸಲ್ಪಡು-ತ್ತವೆ! ಬೆಂಗಳೂರಿನಂತಹ ಮಹಾನಗರಗಳಲ್ಲಿಯೂ ಈ ಮರಗಳನ್ನು ರಸ್ತೆಯಂಚಿನಲ್ಲಿ ನೆರಳಿಗಾಗಿಯೂ, ಅಲಂಕಾರಿಕ ಸಸ್ಯವೆಂದೂ ಬೆಳೆಸಿರುವು-ದನ್ನು ಕಾಣಬಹುದು. ಇದರ ಅಗಲವಾದ ಶುಭ್ರವಾದ ಬಿಳಿ ಹೂಗಳು ತಮ್ಮ ವಿಶಿಷ್ಟವಾದ ರಚನೆಯಿಂದ ದೂರದಿಂದಲೇ ಗಮನ ಸೆಳೆಯುತ್ತವೆ. ಐದು ಎಸಳಿನ ಸಪೂರವಾದ ಪುಷ್ಪಪಾತ್ರೆ ತನ್ನೊಳಗೆ ಅಂಡಾಶಯ, ಪುಂಕೇಸರಗಳನ್ನು ಅಡಗಿಸಿಕೊಂಡಿರುವದಲ್ಲದೆ ಹೊರಗಡೆ ದಪ್ಪವಾದ ಹಸಿರು ಮಿಶ್ರಿತ ಕಂದುಬಣ್ಣದ ಐದು ಎಸಳಿನ ಪತ್ರ ಪಾತ್ರೆಯಿಂದ ಆಚ್ಛಾದಿತವಾಗಿರುತ್ತದೆ.

ತೀಕ್ಷ್ಣ ವಾಸನೆಯ, ರಾತ್ರಿಯಲ್ಲೇ ಅರಳುವ ಹೂಗಳು ಬೆಳಗಾಗುವದರಲ್ಲಿ ಉದುರಿ ಮರದಡಿಯಲ್ಲೆಲ್ಲ, ಸಮವಾಗಿ ಐದು ಭಾಗಗಳಲ್ಲಿ ಸುಲಿದ ಬಾಳೆಯ ಹಣ್ಣಿನ ಸಿಪ್ಪೆಗಳೇನೋ ಎಂಬ ಭ್ರಮೆ ಹುಟ್ಟಿಸುವಂತಿವೆ. ಸೆಪ್ಟಂಬರ್, ಅಕ್ಟೋಬರ್‌ನಲ್ಲಿ ಅರಳುವ ಹೂಗಳು ಕ್ರಮೇಣ ಕಂದುಬಣ್ಣದ ಕಾಯಿಗಳಾಗಿ ಮಾರ್ಪಾಟಾಗುತ್ತವೆ. ಬೆಳವಣಿಗೆ ತುಂಬ ನಿಧಾನವಾಗಿರುವದರಿಂದ ಈ ಮರಗಳು ಇತರ ಮರಗಳಿಗೆ ಹೋಲಿಸಿದರೆ ತುಂಬಾ ವಿರಳ.

ಊಟಕ್ಕಲ್ಲದೇ ಈ ಮರದ ಇತರ ಉಪಯೋಗಗಳೂ ಇವೆ. ಮರದ ಹೂಗಳು ಕಷಾಯದ ರೂಪದಲ್ಲಿ ಬಾಯಿ ಹುಣ್ಣು ಕರುಳಿನ ಹುಣ್ಣು ಇತ್ಯಾದಿಗಳಿಗೆ ಔಷಧಿಯಾಗಿ ಮನೆ ಔಷಧಿಯಲ್ಲಿ ಉಪಯೋಗವಾಗುತ್ತದೆ. ತೀಕ್ಷ್ಣವಾದ ವಾಸನೆಯಿಂದಾಗಿ ಕೀಟನಿರೋಧಕವಾಗಿಯೂ ಮನೆಯಲ್ಲಿ ಸುವಾಸನೆ ಹರಡಿಸುವದಕ್ಕೂ ಉಪಯೋಗವಾಗುತ್ತವೆ. ಎಲೆಗಳು ರಕ್ತಸ್ರಾವ-ವನ್ನು ತಡೆಗಟ್ಟಲು ಉಪಯೋಗವಾಗುವದಷ್ಟೇ ಅಲ್ಲ, ಚಪ್ಪರಗಳ ತಾತ್ಪೂರ್ತಿಕ ಹೊದಿಕೆಯಾಗಿಯೂ ಬಳಕೆ ಆಗುತ್ತವೆ. ಇದರ ಕೆಂಬಣ್ಣದ ಕಟ್ಟಿಗೆ ಹಗುರ-ವಾಗಿದ್ದು ಬಾಳಿಕೆ ಬರುವುದರಿಂದ ತೆಳುವಾದ ಹಲಗೆ, ಪೆಟ್ಟಿಗೆ ಇತ್ಯಾದಿಗಳನ್ನು ತಯಾರಿಸಬಹುದು.

ಈ ಮರ ಹೇರಳವಾಗಿ ಬೆಳೆಯುವ ಪ್ರದೇಶದಲ್ಲಿ ಗ್ರಾಮೀಣ ಜನತೆಗೆ, ಇದರ ಕಟ್ಟಿಗೆಯಿಂದ ಚಿಕ್ಕಪುಟ್ಟ ಆಟಿಕೆ, ಸಾಮಾನು, ಅಲಂಕಾರಿಕ ವಸ್ತುಗಳನ್ನು ತಯಾರಿಸಲು ಸೂಕ್ತ ತರಬೇತಿ ನೀಡಿದಲ್ಲಿ ಅಗತ್ಯವುಳ್ಳವರಿಗೆ ಸ್ವಾವಲಂಬನೆಯ ದಾರಿಯೋ ಆದಾಯದ ಮೂಲವೋ ಆಗುತ್ತದೆ. ಎಲೆಗಳಿಂದ ಪತ್ರಾವಳಿ-ಗಳನ್ನು ತಯಾರಿಸುವಿಕೆಯನ್ನು ಪ್ರೋತ್ಸಾಹಿಸಿದಲ್ಲಿ ಪ್ಲಾಸ್ಟಿಕ್ ಬಳಕೆಯು ಗಣನೀಯ ಪ್ರಮಾಣದಲ್ಲಿ ತಗ್ಗುವುದಲ್ಲದೆ ತನ್ಮೂಲಕ ಪರಿಸರ ಹಾನಿಯನ್ನೂ ತಗ್ಗಿಸುವುದರಲ್ಲಿ ಸಂದೇಹವಿಲ್ಲ.